ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 05-03-1971.

*ಭಟ್ಟಿಯ ಅಲೌಕಿಕ ಮುದ್ರೆ* (भट्ठी की अलौकिक छाप)

ಇಂದು ಬಾಪ್ ದಾದಾ ಪ್ರತಿಯೊಬ್ಬರ ಮಸ್ತಕದಲ್ಲಿ ಯಾವ ಎರಡು ವಿಷಯಗಳನ್ನು ನೋಡುತ್ತಿದ್ದರು? ಒಂದು ಭಾಗ್ಯ ಮತ್ತೊಂದು ಸುಹಾಗ್ (ಸುಮಂಗಲಿತನ,ಸೌಭಾಗ್ಯ), ಎರಡೂ ವಿಷಯಗಳನ್ನು ನೋಡುತ್ತಿದ್ದರು. ಭಟ್ಟಿಯಲ್ಲಿ ತಮ್ಮ ಭಾಗ್ಯ ಮತ್ತು ಸೌಭಾಗ್ಯವನ್ನು ಚೆನ್ನಾಗಿ ನೋಡಬಲ್ಲಿರಾ, ೧೦೦%? ತಮ್ಮ ಮಸ್ತಕದಲ್ಲಿ ಹೊಳೆಯುವ ಭಾಗ್ಯದ ನಕ್ಷತ್ರಗಳನ್ನು ನೋಡಬಲ್ಲಿರಾ? ಭಟ್ಟಿಯಲ್ಲಿ ಸಿಕ್ಕಂತಹ ಈ ದರ್ಪಣದಿಂದ ತಮ್ಮ ಭಾಗ್ಯ ಮತ್ತು ಸುಹಾಗನ್ನು ನೋಡಿಕೊಳ್ಳಿ. ಭಟ್ಟಿಯಲ್ಲಿ ಬರುವುದು ಎಂದರೆ ಯಾವ ಎರಡು ವಿಷಯಗಳನ್ನು ಪ್ರಾಪ್ತಿ ಮಾಡಿಕೊಳ್ಳುವುದು? ಇಂದು ಭಟ್ಟಿಯವರೊಂದಿಗೆ ಮಿಲನ ಮಾಡಲು ಬಂದಿದ್ದೇವೆ. ಆದ್ದರಿಂದ ಅವರ ಪರೀಕ್ಷೆ ತೆಗೆದುಕೊಳ್ಳುತ್ತೇವೆ. ಮುಖ್ಯ ಯಾವ ಎರಡು ಮಾತುಗಳು ಸಿಗುತ್ತವೆ. ಹೇಳಿ? (ಪ್ರತಿಯೊಬ್ಬರೂ ಭಿನ್ನ ಭಿನ್ನ ಮಾತುಗಳನ್ನು ಹೇಳಿದರು) ಬಹಳ ಚೆನ್ನಾಗಿ ಹೇಳಿದಿರಿ, ಏಕೆಂದರೆ ಮಾತೆಯರು ಇಷ್ಟು ಹೇಳಲು ಯೋಗ್ಯರಾದರೆ ಬಹಳ ಸೇವೆ ಮಾಡಬಹುದು. ಹಾಗಾದರೆ ಭಟ್ಟಿಯಿಂದ ಸಿಕ್ಕಂತಹ ಎರಡು ಮುಖ್ಯ ಮಾತುಗಳನ್ನು ಜೊತೆಗೆ ತೆಗೆದುಕೊಂಡು ಹೋಗಿ. ಒಂದು ಸ್ವಯಂನ್ನು ನೋಡಿಕೊಳ್ಳುವ ದರ್ಪಣ ಇನ್ನೊಂದು ಯೋಗ ಎಂದರೆ ನೆನಪಿನ ಗೋಳ, ಪ್ರಕಾಶದ ಗೋಳವನ್ನು ಸದಾ ಜೊತೆಗೆ ಇಟ್ಟುಕೊಳ್ಳುವವರ ಕೈಯಲ್ಲಿ ಮತ್ತೆ ಯಾವ ಗೋಳ ಬರುವುದು? ಅದು ತಮ್ಮ ಸ್ಮೃತಿ ಚಿಹ್ನೆಯ ಚಿತ್ರವಾಗಿದೆ. ಕೃಷ್ಣನ ಚಿತ್ರದಲ್ಲಿ ಸೃಷ್ಟಿಯ ಗೋಳವಿದೆ. ಪ್ರಕಾಶದ ಗೋಳ ಎಂದರೆ ಪ್ರಕಾಶದ ಚಿತ್ರದ ಒಳಗೆ ಸದಾ ಇರಬೇಕು. ಪ್ರಕಾಶದ ಗೋಳವಾದಾಗ ವಿಶ್ವದ ರಾಜ್ಯದ ಗೋಳವನ್ನು ಪಡೆಯಬಹುದು. ಈಗಿದೆ ಪ್ರಕಾಶದ ಗೋಳ ಭವಿಷ್ಯದಲ್ಲಿ ಈ ರಾಜ್ಯದ ಗೋಳ, ಹಾಗಾದರೆ ಭಟ್ಟಿಯಲ್ಲಿ ಒಂದು ದರ್ಪಣ ಸಿಗುವುದು ಮತ್ತು ಎರಡನೆಯದು ನೆನಪಿನ ಯಾತ್ರೆಯನ್ನು ನಿರಂತರ ಶ್ರೇಷ್ಠ ಮಾಡಿಕೊಳ್ಳಲು ಪ್ರಕಾಶದ ಗೋಳ ಉಡುಗೊರೆಯಾಗಿದೆ. ಆದರೆ ಎರಡನ್ನೂ ತೆಗೆದುಕೊಂಡು ಹೋಗಬೇಕು. ಇಲ್ಲಿಯೇ ಬಿಟ್ಟು ಹೋಗುವುದಲ್ಲ. ಎರಡೂ ಉಡುಗೊರೆಯನ್ನು ಜೊತೆಗೆ ತೆಗೆದುಕೊಂಡು ಹೋಗಿ ಜೊತೆಗೆ ಇಟ್ಟುಕೊಂಡರೆ ಮತ್ತೆ ಏನಾಗುವಿರಿ? ತಂದೆಯ ಮಹಿಮೆಯ ಗೀತೆಯಾದ ಸತ್ಯಂ, ಶಿವಂ, ಸುಂದರಂ..... ಹೇಗೆ ಮಾಡಲ್ಪಟ್ಟಿದೆಯೋ ಅದೇ ರೀತಿ ತಾವೂ ಸಹ ಮಾಸ್ಟರ್ ಸತ್ಯಂ, ಶಿವಂ, ಸುಂದರಂ.... ಆಗುವಿರಿ. ಆ ದರ್ಪಣದಿಂದ ಸತ್ಯ ಮತ್ತು ಅಸಲಿ ಸುಂದರತೆಯ ಸಾಕ್ಷಾತ್ಕಾರವಾಗುವುದು. ಈ ರೀತಿ ತಮ್ಮ ಮುಖಚರ್ಯೆಯನ್ನು ಮಾಡಿಕೊಂಡಿರುವಿರಾ? ಲೌಕಿಕತನವನ್ನು ಈಗ ಭಟ್ಟಿಯಲ್ಲಿ ಸ್ವಾಹಾ ಮಾಡಿರುವಿರಾ? ಯಾವುದೇ ಪ್ರಕಾರದ ಲೌಕಿಕ ವೃತ್ತಿ, ಸಂಬಂಧದ ಕೃತಿ, ಲೌಕಿಕ ಮರ್ಯಾದೆಗಳು, ಲೌಕಿಕ ರೀತಿ-ಪದ್ಧತಿಗಳಿಗೆ ವಶರಾಗಿ ಅಲೌಕಿಕ ರೀತಿ  ಮತ್ತು ಪ್ರೀತಿಯನ್ನು ಮರೆಯುತ್ತಿಲ್ಲ ತಾನೆ? ಅಲೌಕಿಕ ಪ್ರೀತಿ ಮತ್ತು ಅಲೌಕಿಕ ರೀತಿ(ಪದ್ಧತಿ) ಯ ಪೂರ್ಣ ಮುದ್ರೆ ಅಥವಾ ಛಾಪು ಹಾಕಿದೆಯೇ? ಯಾರು ಎಷ್ಟೇ ಅಳಿಸಲು ಪ್ರಯತ್ನ ಪಟ್ಟರೂ ಅಳಿಸದೇ ಇರುವಂತಹ ಮುದ್ರೆಯನ್ನು ಪೂರ್ಣ ಹಾಕಲಾಗಿದೆ. ಈ ರೀತಿ ಮುದ್ರೆಯನ್ನು ಹಾಕಿಸಿಕೊಂಡವರು ಕೈಯೆತ್ತಿ. ಲೌಕಿಕ ರೀತಿ- ಪದ್ಧತಿಯ ಬಹಳ ಕಠಿಣ ಪರೀಕ್ಷೆ ಬರುವುದು. (ಕೆಲವರು ಕೈ ಎತ್ತಲಿಲ್ಲ) ಇವರುಗಳು ನಮ್ಮ ಸುರಕ್ಷಿತತೆಯನ್ನು ಇಟ್ಟುಕೊಳ್ಳೋಣ ಎಂದು ತಿಳಿಯುತ್ತಾರೆ. ಆದರೆ ಯಾರು ಎಷ್ಟು ಸಾಹಸವನ್ನು ಇಟ್ಟುಕೊಳ್ಳುವರೋ ಅಷ್ಟು ಸಹಯೋಗ ಸಿಗುವುದರಲ್ಲಿ ಸುರಕ್ಷಿತತೆಯಿದೆ. ಮೊದಲೇ ತಮ್ಮಲ್ಲಿ ಸಂಶಯ ಬುದ್ಧಿಯಿದ್ದರೆ ಸೋಲಾಗುವುದು. ನಾವು ನಾಪಾಸಾದರೆ, ಗೊತ್ತಿಲ್ಲ ಎಂದು ತಮ್ಮಲ್ಲಿ ಸಂಶಯವನ್ನು ಏಕೆ ಇಟ್ಟುಕೊಳ್ಳುತ್ತೀರಿ. ನಾವು ವಿಜಯ ಪ್ರಾಪ್ತಿ ಮಾಡಿಕೊಂಡು ತೋರಿಸುತ್ತೇವೆ ಎಂದು ಏಕೆ ಯೋಚಿಸುವುದಿಲ್ಲ. ವಿಜಯೀ ರತ್ನಗಳಾಗಿದ್ದೀರಲ್ಲವೆ? ಆದ್ದರಿಂದ ಎಂದಿಗೂ ತಮ್ಮ ಪುರುಷಾರ್ಥದಲ್ಲಿ ಸಂಶಯ ಬುದ್ಧಿಯವರಾಗಬಾರದು. ಸಂಶಯ ಬುದ್ಧಿಯಾಗುವುದರಿಂದ ಸೋಲಾಗುತ್ತದೆ. ತಮ್ಮದೇ ಸಂಶಯದ ಸಂಕಲ್ಪ ಮಾಯಾಜೀತ್ ರಾಗಲು ಬಿಡುವುದಿಲ್ಲ.

ಬಹುಸಂಖ್ಯಾತರು ವಿಜಯೀ ರತ್ನಗಳಾಗಿದ್ದಾರೆ. ವಿಜಯದ ತಿಲಕವನ್ನೂ ಹಚ್ಚಿಕೊಂಡು ಹೋಗುತ್ತಿರುವಿರಲ್ಲವೇ? "ಸದಾ ವಿಜಯದ ತಿಲಕ ನಮ್ಮ ಜನ್ಮಸಿದ್ಧ ಅಧಿಕಾರ" ಎಂಬುದನ್ನು ಸ್ಮರಣೆಯಲ್ಲಿ ಇಟ್ಟುಕೊಂಡು ಹೆಜ್ಜೆಯನ್ನಿಡಬೇಕು. ಅಧಿಕಾರಿಯಾಗಿ ಕರ್ಮ ಮಾಡುವುದರಿಂದ ವಿಜಯ ಎಂದರೆ ಸಫಲತೆಯ ಅಧಿಕಾರ ಅವಶ್ಯ ಪ್ರಾಪ್ತಿಯಾಗುವುದು. ಇದರಲ್ಲಿ ಯಾವುದೇ ಸಂಕಲ್ಪ ಬರುವ ಅವಶ್ಯಕತೆಯಿಲ್ಲ. "ವಿಜಯ ಸಿಗುವುದೋ ಇಲ್ಲವೋ ಗೊತ್ತಿಲ್ಲ ಎಂದು ಎಂದಿಗೂ ಸ್ವಪ್ನದಲ್ಲಿಯೂ, ಸಂಕಲ್ಪದಲ್ಲಿಯೂ ಬರಬಾರದು. ಮಾಸ್ಟರ್ ಜ್ಞಾನಪೂರ್ಣರ ಮುಖದಿಂದ ಗೊತ್ತಿಲ್ಲ' ಎಂಬ ಶಬ್ದ ಬರಬಾರದು. ಸೃಷ್ಟಿಯ ಆದಿ-ಮಧ್ಯ-ಅಂತ್ಯವನ್ನು, ಮೂರು ಕಾಲಗಳನ್ನು ತಿಳಿದ ಮೇಲೆ ಮಾಸ್ಟರ್ ಜ್ಞಾನಪೂರ್ಣರಾಗಿದ್ದೀರಿ. ಹಾಗಾದರೆ ಅಂತಹ ಮಾಸ್ಟರ್ ಜ್ಞಾನಪೂರ್ಣರ ಮುಖದಿಂದ ಗೊತ್ತಿಲ್ಲ ಎಂಬ ಶಬ್ದ ಬರಬಾರದು. ಅವರಿಗೆ ಎಲ್ಲವೂ ಗೊತ್ತಿದೆ. ಇದು ಅಜ್ಞಾನಿಗಳ ಭಾಷೆ. ಜ್ಞಾನಿಗಳ ಭಾಷೆಯಲ್ಲ, ಏನಾದರೂ ತಪ್ಪು ಮಾಡಿದರೆ ಜ್ಞಾನದ ಆಧಾರದ ಮೇಲೆ ಈ ತಪ್ಪು ಕೆಲಸವನ್ನು ಮಾಡಿದ್ದೆನು ಎಂದು ಗೊತ್ತಾಗುತ್ತದೆಯಲ್ಲವೇ? ಗೊತ್ತಿಲ್ಲ, ಇದು ಆಗುವುದೋ ಇಲ್ಲವೋ ಎಂದು ಹೇಳುವುದು ಬ್ರಾಹ್ಮಣರ ಭಾಷೆಯಲ್ಲ. ಆದ್ದರಿಂದ ಭಟ್ಟಿಯಲ್ಲಿ ಈ ಮುದ್ರೆಯನ್ನು 21 ಜನ್ಮಗಳವರೆಗೆ ಅವಿನಾಶಿಯಾಗಿರುವಂತೆ ಹಾಕಿಕೊಂಡು ಹೋಗಿ. ಭಟ್ಟಿಯ ಎರಡೂ ಉಡುಗೊರೆಗಳನ್ನು ಎಲ್ಲರೂ ತಮ್ಮ ಬಳಿ ಇಟ್ಟುಕೊಂಡಿರುವಿರಾ? ಈಗ ಭಟ್ಟಿಯಿಂದ ಹೋಗಿ ಏನು ಮಾಡುವಿರಿ? ತಮ್ಮನ್ನು ಪರಿವರ್ತನೆ ಮಾಡಿಕೊಳ್ಳಲು ಭಟ್ಟಿಯಲ್ಲಿ ಬಂದಿರುವಿರಿ. ಯಾರು ಎಷ್ಟು ಸ್ವಯಂ ಪರಿವರ್ತನೆ ಮಾಡಿಕೊಳ್ಳುವಿರೋ ಅವರು ಅಷ್ಟು ಬೇರೆಯವರನ್ನು ಪರಿವರ್ತನೆ ಮಾಡಬಹುದು. ಪರಿವರ್ತನೆ ಕಡಿಮೆ ಆಗುತ್ತಿದೆ ಎಂದು ಸೇವೆಯಲ್ಲಿ ಕಂಡಾಗ, ತಮ್ಮಲ್ಲಿ ಪರಿವರ್ತನೆಯನ್ನು ತರುವಂತಹ ಶಕ್ತಿ ಬಂದಿದೆಯೇ ಎಂದು ತೆಗೆದುಕೊಂಡು ಹೋಗುತ್ತಿರುವ ದರ್ಪಣದಲ್ಲಿ ನೋಡಿಕೊಳ್ಳಿ ತಮ್ಮಲ್ಲಿ ಪರಿವರ್ತನೆ ಮಾಡುವ ಶಕ್ತಿ ಕಡಿಮೆಯಿದ್ದರೆ ಬೇರೆಯವರಲ್ಲಿಯೂ ಪರಿವರ್ತನೆಯನ್ನು ತರಲಾರಿರಿ. ಈ ಎರಡು ಮಾತುಗಳನ್ನು ನೆನಪಿಡಿ. ಒಂದು ಎಲ್ಲಾ ಮಾತುಗಳಲ್ಲಿ ಪರಿವರ್ತನೆಯನ್ನು ತರುವುದು, ಲೌಕಿಕದಿಂದ ಅಲೌಕಿಕಕ್ಕೆ ಬರುವುದು. ಇನ್ನೊಂದು ಪರಿಪಕ್ವತೆಯನ್ನು(ಲೋಪಮುಕ್ತ) ತರುವುದು. ಪರಿಪಕ್ವತೆಯಿಲ್ಲದಿದ್ದರೆ ಸಫಲತೆ ಸಿಗುವುದಿಲ್ಲ. ಪರಿವರ್ತನೆಯನ್ನೂ ತರಬೇಕು ಮತ್ತು ತಮ್ಮಲ್ಲಿ ಪರಿಪಕ್ವತೆ ಎಂದರೆ ಬಲವನ್ನೂ ತರಬೇಕು. ಈ ಮುಖ್ಯ ಎರಡೂ ಮಾತುಗಳನ್ನು ಪ್ರವೃತ್ತಿಯಲ್ಲಿರುತ್ತಾ ಕೆಲಸ ಮಾಡುವ ಸಮಯ ನೆನಪಿಡಬೇಕು. ಎರಡೂ ಮಾತುಗಳನ್ನು ನೆನಪಿಟ್ಟುಕೊಂಡರೆ ನಿಶ್ಚಯವೇ ವಿಜಯವಾಗಿದೆ. ಸಹಜ ಮಾತನ್ನು ಹೇಳಿದೆವಲ್ಲವೇ? ಮಾತೆಯರಿಗೆ ಸಹಜ ಮಾತುಗಳು ಬೇಕು. ಮಾತೆಯರು ಶೃಂಗಾರಕ್ಕಾಗಿ ದರ್ಪಣದಲ್ಲಿ ನೋಡುತ್ತಿರುತ್ತಾರೆ ಆದ್ದರಿಂದ ಬಾಪ್ ದಾದಾ ಸಹ ಅದೇ ಕೆಲಸ ಕೊಟ್ಟಿದ್ದಾರೆ. ಒಳ್ಳೆಯದು.

ಮಧುಬನದ ಭಟ್ಟಿ ಬೇಹದ್ದಿನ ಭಟ್ಟಿಯಾಗಿದೆ, ಆದ್ದರಿಂದ ತಮ್ಮ ಪ್ರವೃತ್ತಿಯನ್ನೂ ಈ ಬೇಹದ್ದಿನ ಭಟ್ಟಿಯ ಮಾದರಿಯ ರೂಪವೆಂದು ತಿಳಿದು ನಡೆಯಿರಿ. ಯಾವುದೇ ವಸ್ತುವಿನ ಮಾದರಿಯನ್ನು ಚಿಕ್ಕದಾಗಿ ಮಾಡುತ್ತಾರೆ. ಹೇಗೆ ಇಲ್ಲಿ ಭಟ್ಟಿ ಮಾಡಿ ಹೋಗುತ್ತಿರುವಿರೋ ಅದೇ ರೀತಿ ಪ್ರವೃತ್ತಿಯನ್ನೂ ಮಾದರಿಯ ಹಾಗೆ ಮಾಡಿ. ಆಗ ಏನಾಗುವುದು? ಅದೇ ಭಟ್ಟಿಯ ಮಾತುಗಳು, ಧಾರಣೆ, ದಿನಚರಿಯನ್ನು ಇಟ್ಟುಕೊಳ್ಳಲು ಸಾಧ್ಯವೇ? ಆದ್ದರಿಂದ ಪ್ರವೃತ್ತಿಯಲ್ಲಿ ಬಂದು ತಮ್ಮ ವೃತ್ತಿಯನ್ನು ಭಟ್ಟಿಯಲ್ಲಿಯಿದ್ದಂತೆಯೇ ಇಟ್ಟುಕೊಳ್ಳಬೇಕು. ವೃತ್ತಿಯನ್ನು ಬದಲಿಸಬೇಡಿ. ಹೇಗೆ ಭಟ್ಟಿಯಲ್ಲಿ ಶ್ರೇಷ್ಠ ವೃತ್ತಿಯಿರುವುದೋ ಹಾಗೆ ಪ್ರವೃತ್ತಿಯಲ್ಲಿಯೂ ಇರಬೇಕು. ವೃತ್ತಿ ಬದಲಾದರೆ ಪ್ರವೃತ್ತಿಯ ಪರಿಸ್ಥಿತಿಗಳು ಸ್ಥಿತಿಯನ್ನು ಅಲುಗಾಡಿಸುತ್ತವೆ. ಆದರೆ ವೃತ್ತಿಯನ್ನು ಅಷ್ಟೇ ಶ್ರೇಷ್ಠವಾಗಿಟ್ಟುಕೊಂಡರೆ ಪ್ರವೃತ್ತಿಯಲ್ಲಿ ಬರುವ ಅನೇಕ ಪರಿಸ್ಥಿತಿಗಳು ತಮ್ಮ ಸ್ಥಿತಿಯನ್ನು ಅಲುಗಾಡಿಸುವುದಿಲ್ಲ. ತಿಳಿಯಿತೇ? ವೃತ್ತಿಯನ್ನು ಜೊತೆಗೆ ತೆಗೆದುಕೊಂಡು ಹೋಗಿ ನಂತರ ಹೇಗೆ ವಿಜಯಿಯಾಗಿರುವಿರಿ ಎಂಬುದನ್ನು ನೋಡಿ. ಮಾತೆಯರ ಜೊತೆಗೆ ಎಲ್ಲರ ಸ್ನೇಹವಿದೆ ಏಕೆಂದರೆ ಮಾತೆಯರು ಬಹಳ ದುಃಖವನ್ನು ಸಹನೆ ಮಾಡಿದ್ದಾರೆ. ಆದ್ದರಿಂದ ಮಾತೆಯರೇ ಹೆಚ್ಚು ಮೊರೆಯಿಟ್ಟಿದ್ದಾರೆ. ಬಹಳ ದುಃಖ ಸಹನೆ ಮಾಡಿರುವ ಕಾರಣ, ಪೆಟ್ಟನ್ನು ಸಹಿಸಿದ ಮಾಡಿರುವ ಕಾರಣ, ದಣಿದ ಕಾರಣ ತಂದೆ ಸ್ನೇಹದಿಂದ ಕಾಲು ಒತ್ತುತ್ತಾರೆ. ಇಲ್ಲಿ ಕಾಲು ಎಂದರೆ ಸ್ಥೂಲವಾದ ಕಾಲಲ್ಲ. ವಿಶೇಷ ಸ್ನೇಹವನ್ನು ಕೊಡುವುದೇ ಕಾಲನ್ನು ಒತ್ತುವುದಾಗಿದೆ. ಇವರಿಗೆ ಸ್ನೇಹ ಮತ್ತು ಸಾಹಸವನ್ನು ಕೊಡಿ. ಕೇವಲ ಸ್ನೇಹವನ್ನು ನೆನಪಿಡುವುದಲ್ಲ. ಆದರೆ ಕೊಟ್ಟಂತಹ ಸಾಹಸವನ್ನು ಸಹ ನೆನಪಿಟ್ಟುಕೊಳ್ಳಬೇಕು. ಒಳ್ಳೆಯದು.

ಭಟ್ಟಿಯ ಎಲ್ಲಾ ಅಭ್ಯಾಸ ಅಥವಾ ಶಿಕ್ಷಣದ ಸಾರ ಮೂರು ಶಬ್ದಗಳಲ್ಲಿ ನೆನಪಿಡಿ. ಯಾವ ಮೂರು ಶಬ್ದಗಳು? **ಕತ್ತರಿಸುವುದು, ಪರಿವರ್ತಿಸುವುದು, ಜೋಡಿಸುವುದು, ಕರ್ಮಬಂಧನ ಕತ್ತರಿಸುವುದನ್ನು ಕಲಿತಿರುವಿರಲ್ಲವೇ? ಮತ್ತೆ ತಮ್ಮ ಸಂಸ್ಕಾರಗಳನ್ನು, ಸ್ವಭಾವಗಳನ್ನು ಪರಿವರ್ತಿಸುವುದನ್ನು ಕಲಿತಿರುವಿರಿ ಮತ್ತು ಜೋಡಿಸುವುದನ್ನು ಕಲಿತಿರುವಿರಿ ಆದ್ದರಿಂದ ಈ ಮೂರು ಶಬ್ದಗಳನ್ನು ನೆನಪಿಡಬೇಕು.** ಮತ್ತು 'ಕತ್ತರಿಸುತ್ತಿದ್ದೇನೆಯೇ, ಪರಿವರ್ತಿಸುತ್ತಿದ್ದೇನೆಯೇ ಮತ್ತು ಜೋಡಿಸುತ್ತಿದ್ದೇನೆಯೇ, ಈ ಮೂರರಲ್ಲಿ ಯಾವ ಕೊರತೆ ಇಲ್ಲವೇ' ಎಂದು ಸದಾ ತಮ್ಮನ್ನು ನೋಡಿಕೊಳ್ಳಬೇಕು ಆಗ ಬೇಗನೇ ಸಂಪೂರ್ಣರಾಗುವಿರಿ. ಈ ಗುಂಪಿಗೆ ವಿಶೇಷ ಈ ಸ್ಮೃತಿಯ ತಿಲಕವನ್ನು ಕೊಡುತ್ತಿದ್ದೇವೆ. ತಿಲಕ ಸ್ಮೃತಿಯ ಚಿಹ್ನೆಯಾಗಿದೆ. ಆದ್ದರಿಂದ ಸದಾ ಈ ಸ್ಮೃತಿಯಿರಬೇಕು ಈ ಕಣ್ಣುಗಳಿಂದ ಯಾವೆಲ್ಲಾ ವಿನಾಶಿ ವಸ್ತುಗಳನ್ನು ನೋಡುತ್ತಿದ್ದರೂ ತಮ್ಮ ಹೊಸ ಸಂಬಂಧ, ಹೊಸ ಸೃಷ್ಟಿಯನ್ನೇ ನೋಡಬೇಕು. ಈ ಕಣ್ಣುಗಳಿಂದ ಯಾವ ವಿನಾಶಿ ವಸ್ತುಗಳು ಕಂಡು ಬರುತ್ತವೆಯೋ ಅವುಗಳಲ್ಲಿ ವಿನಾಶದ ಸ್ಮೃತಿಯಿರಲಿ. ಈ ಸ್ಮೃತಿಯ ತಿಲಕ ಈ ಗುಂಪಿಗೆ ಕೊಡುತ್ತಿದ್ದೇವೆ. ಆಗ ಯಾವ ಮಾತಿನಲ್ಲಿಯೂ ಸೋಲಾಗಲಾರದು ಏಕೆಂದರೆ ವಿನಾಶಿ ವಸ್ತುಗಳನ್ನು ನೋಡುತ್ತೀರಿ, ಆದ್ದರಿಂದ ವಿಜಯಿಯಾಗಲು ಪ್ರತಿದಿನವೂ ಅಮೃತ ವೇಳೆ ಸ್ವಯಂ ಸ್ಮೃತಿಯ ತಿಲಕವನ್ನು ಹಚ್ಚಿಕೊಳ್ಳಬೇಕು. ಮಾತೆಯರು ಮುಗ್ಧ ಈ ಮಾತೆಯರು ಮೈದಾನಕ್ಕೆ ಬಂದರೆ ಇಂದು ತಮ್ಮನ್ನು ಸಿಂಹವೆಂದು ತಿಳಿದವರು ಕುರಿಯಾಗಿ ತಮ್ಮ ಕಾಲುಗಳಿಗೆ ಬೀಳುತ್ತಾರೆ. ಏಕೆಂದರೆ, ಯಾವ ಮಾತಿನಲ್ಲಿ ಅವರು ದುರ್ಬಲ ಅಥವಾ ಹೇಡಿಗಳೊ ಆ ಮಾತಿನಲ್ಲಿ ತಾವು ಪ್ರತ್ಯಕ್ಷ ಪ್ರಮಾಣವಾಗಿದ್ದೀರಿ. ತಮ್ಮ ಪ್ರತ್ಯಕ್ಷ ಪ್ರಮಾಣವನ್ನು ನೋಡಿ ಅವರು ನಾಚಿಕೆ ಪಡುವರು ಎಂದರೆ ಕುರಿಯಾದರಲ್ಲವೇ? ಮಾತೆಯರು ಒಂದು ಕ್ಷಣದಲ್ಲಿ ಸಿಂಹವನ್ನು ಕುರಿಯನ್ನಾಗಿ ಮಾಡುವಂತಹ ಶ್ರೇಷ್ಠ ಸೇವೆಯನ್ನು ಮಾಡಬಲ್ಲರು. ಇಂತಹ ಜಾದುಗಾರಿಣಿಯಾಗಿದ್ದೀರಿ. ಜಾದೂದಿಂದ ಸಿಂಹವನ್ನು ಕುರಿ, ಕುರಿಯನ್ನು ಸಿಂಹವನ್ನಾಗಿ ಮಾಡುತ್ತಾರಲ್ಲವೇ? ಮಾತೆಯರೂ ಸಹ ಈ ರೀತಿ ಜಾದೂ ತೋರಿಸಬಲ್ಲಿರಿ. ಕೇವಲ ಸಿಂಹಿಣಿಯರಾಗಿ, ಆಗ ಆ ಸಿಂಹಗಳು ಕುರಿಯಾಗುವವು. ಆದ್ದರಿಂದ ತೋರಿಸಿದಂತಹ ಅಂತ್ಯದ ಈ ಧರ್ಮಯುದ್ಧದಲ್ಲಿ ಗರ್ಜನೆಯಾಗುವುದು. ನಿಮ್ಮ ಈ ಸೇವೆಯಿಂದ ಸಿಂಹ ಕುರಿಯಾದಾಗ ಅವು ಅನುಯಾಯಿಗಳು ಹಿಂಬಾಲಿಸುವರು. ಕೇವಲ ಒಂದು ಸಿಂಹವನ್ನು ಕುರಿ ಮಾಡಿದರೆ ಅನೇಕ ಸಿಂಹಗಳು ಬಲೆಯಲ್ಲಿ ಬರುವರು. ಆದ್ದರಿಂದ ಮಾತೆಯರು ಇಷ್ಟು ಉನ್ನತ ಸೇವೆಗೆ ತಯಾರಾಗಿರಬೇಕು. ಇಷ್ಟು ದೊಡ್ಡ ಶಕ್ತಿದಳ ಆಕ್ರಮಣ ಮಾಡಿದರೆ ಅವರು ಉಳಿಯುವರೇ? ಸವಾಲು ಹಾಕುವ ಸಾಹಸ ಬೇಕು. ಈಗ ಪ್ರ್ಯಾಕ್ಟಿಕಲ್ ಪರೀಕ್ಷೆಗಳನ್ನು  ಪಾರು ಮಾಡಬೇಕು. ಒಂದು ಸೈದ್ಧಾಂತಿಕ ಪೇಪರ್  ಇನ್ನೊಂದು ಪ್ರಾಕ್ಟಿಕಲ್ ಪೇಪರ್, ಸಿದ್ಧಾಂತದ ಪೇಪರನಲ್ಲಿ ಪಾಸಾಗಿದ್ದೀರಿ, ಈಗ ಪ್ರಾಯೋಗಿಕ (ಪ್ರಾಕ್ಟಿಕಲ್) ಪೇಪರ್ ನಲ್ಲಿ ಪಾಸಾಗಬೇಕು. ಸಾಹಸಿ ಶಕ್ತಿಯರಿಗೆ ಸರ್ವಶಕ್ತಿವಂತನ ಸಹಯೋಗ ಇರುತ್ತದೆ ಎಂಬುದು ಸದಾ ನೆನಪಿದೆಯಲ್ಲವೇ? ಪಡೆದ ಪರಿಶ್ರಮವನ್ನು ತಿರುಗಿ ಒಪ್ಪಿಸಬೇಕು  ಇವರೆಲ್ಲಾ ಸಿಂಹಿಣಿಯರಾಗಿದ್ದಾರೆ. ಸಿಂಹಿಣಿಯರು ಯಾರಿಗೂ ಎಂದೂ ಹೆದರುವುದಿಲ್ಲ. ನಿರ್ಭಯರಾಗಿರುತ್ತಾರೆ. ಏನಾಗುವುದೋ ಎಂಬ ಭಯವೂ ಇಲ್ಲ. ಇದರಿಂದಲೂ ನಿರ್ಭಯರಾಗಬೇಕು. ಸಿಂಹಿಣಿಯರಾಗಿರುವಿರಾ? (ಆಗುವೆವು) ಯಾವಾಗ? ಭಟ್ಟಿಯಲ್ಲಿ ಬರುವುದು ಎಂದರೆ ಬದಲಾಗುವುದು ತಿಳಿಯಿತೇ? ಪರಿವರ್ತನೆಯ ಸಮಾರಂಭವನ್ನು ಆಚರಿಸುತ್ತಿರುವಿರಲ್ಲವೇ? ಬಾಪ್ ದಾದಾ ಸಹ ಪರಿವರ್ತನೆಯ ಸಮಾರಂಭದಲ್ಲಿ ಬಂದಿದ್ದಾರೆ. ಇಂದು ಅಂತಿಮ ಮುದ್ರೆಯನ್ನು ಹಾಕಬೇಕಾಗಿದೆ. ಆಮೇಲೆ ಈ ಪರಿವರ್ತನೆಯನ್ನು ಮರೆಯಬಾರದು. ಪ್ರತಿಯೊಬ್ಬರೂ ತಮ್ಮಲ್ಲಿ ಯಾವುದಾದರೂ ವಿಶೇಷತೆಯನ್ನು ತುಂಬಿಕೊಳ್ಳಬೇಕು. ಯಾವುದಾದರೂ ಒಂದು ವಿಷಯದಲ್ಲಾದರೂ ನಂಬರವನ್ ಆಗಲೇಬೇಕು. ಆ ರೀತಿ ಎಲ್ಲದರಲ್ಲೂ ಆಗಬೇಕು, ಆಗದಿದ್ದರೆ ಯಾವುದಾದರೂ ವಿಷಯದಲ್ಲಿ ವಿಶೇಷ ನಂಬರವನ್ ತಮ್ಮನ್ನು ಅವಶ್ಯ ಮಾಡಿಕೊಳ್ಳಬೇಕು. ಇಲ್ಲಿಂದ ಹೋಗಿ ಇನ್ನೂ ಸೇವೆಯಲ್ಲಿ ಸಹಯೋಗಿಗಳಾಗಲು ಹೇಳಲಾದ ಯೋಜನೆಯನ್ನು ಮಾಡಿರುವಿರಾ? ಮಾಡಿದ ಯೋಜನೆಗನುಸಾರ ಅವಶ್ಯವಾಗಿ ತಯಾರಾಗಿರಬೇಕು. ವಿಘ್ನಗಳು ಬರುತ್ತವೆ ಆದರೆ ಅವಶ್ಯಕ ಮಾತು ಎಂದು ತಿಳಿದಾಗ ಅದಕ್ಕೆ ವ್ಯವಸ್ಥೆಯನ್ನು ಮಾಡಲಾಗುತ್ತದೆ. ತಮ್ಮ ಪ್ರವೃತ್ತಿಯಲ್ಲಿ ಅನೇಕ ಅವಶ್ಯಕ ಮಾತುಗಳು ಮುಂದೆ ಬರುವವು ಆಗ ವ್ಯವಸ್ಥೆ ಮಾಡುತ್ತೀರಲ್ಲವೇ? ಅದೇ ರೀತಿ ತಮ್ಮನ್ನು ಸ್ವತಂತ್ರ ಮಾಡಿಕೊಳ್ಳಲು ಯಾವುದಾದರೂ

ವ್ಯವಸ್ಥೆಯನ್ನು ಮಾಡಿ. ಜೊತೆಗಾರರನ್ನು ಮಾಡಿಕೊಳ್ಳಿ. ಪರಸ್ಪರರಲ್ಲಿ ದೈವಿ ಪರಿವಾರದವರು ಸಹಯೋಗಿಗಳಾಗುವರು ಆದರೆ ಸ್ನೇಹ ಮತ್ತು ಸಹಯೋಗಿಯಾದಾಗ ಅವರನ್ನು ಸಹ ಮಾಡಿಕೊಳ್ಳಬಹುದು. ತಮ್ಮ ಬಂಧನವನ್ನು ಹೇಗೆ ಸಡಿಲಗೊಳಿಸಬೇಕೆಂದು ಯೋಜನೆಗಳನ್ನು ಮಾಡಬೇಕು. ಚತುರರು ತಮ್ಮ ಬಂಧನಗಳಿಂದ ಮುಕ್ತರಾಗಲು ಯುಕ್ತಿಯನ್ನು ರಚಿಸುತ್ತಾರೆ. ವ್ಯವಸ್ಥೆಯಾದರೆ ಬರುವೆನು ಎಂದಲ್ಲ, ವ್ಯವಸ್ಥೆ ತಾವೇ ಮಾಡಿಕೊಳ್ಳಬೇಕು. ತಮ್ಮನ್ನು ತಾವು ಸ್ವತಂತ್ರ ಮಾಡಿಕೊಳ್ಳಬೇಕು. ಬೇರೆಯವರು ಮಾಡುವುದಿಲ್ಲ. ಯೋಗಯುಕ್ತರಾಗಿ ಈ ರೀತಿ ಯೋಜನೆಗಳನ್ನು ಯೋಚಿಸುವುದರಿಂದ ಇಚ್ಛೆಯ ಪೂರ್ತಿಗಾಗಿ ವ್ಯವಸ್ಥೆಯಾಗುವುದು. ಕೇವಲ ನಿಶ್ಚಯ ಬುದ್ಧಿಯಾಗಿ ತಮ್ಮ ಉತ್ಸಾಹವನ್ನು ಹೆಚ್ಚಿಸಿಕೊಳ್ಳಿ. ಉತ್ಸಾಹ ಕಡಿಮೆಯಾದರೆ ವ್ಯವಸ್ಥೆಯಾಗುವುದಿಲ್ಲ. ಸಹಯೋಗಿ ಯಾರೂ ಸಿಗುವುದಿಲ್ಲ. ಸಾಹಸಿಗಳಾಗಿ ಆಗ ಯಾರಾದರೂ ಸಹಯೋಗಗಳಾಗುವರು, ತಮ್ಮನ್ನು ಸ್ವತಂತ್ರ ಮಾಡಿಕೊಳ್ಳಲು ಯಾರು ಎಷ್ಟು ಶಕ್ತಿಯನ್ನು ತುಂಬಿಕೊಂಡಿರುವರೆಂದು ಈಗ ನೋಡೋಣ. ಮಾಯಾಜೀತ್ ಆಗಿರುವಿರಲ್ಲವೇ? ಆದರೆ ತಮ್ಮನ್ನು ಸ್ವತಂತ್ರ ಮಾಡಿಕೊಳ್ಳುವ ಶಕ್ತಿಯೂ ಬಹಳ ಅವಶ್ಯಕವಾಗಿದೆ. ಎಷ್ಟು ಶಕ್ತಿಯನ್ನು ತುಂಬಿಕೊಂಡಿರುವಿರೆಂಬ ಪೇಪರ್ ಇರುವುದು. ಪ್ರವೃತ್ತಿಯಲ್ಲಿರುತ್ತಾ ಸ್ವತಂತ್ರರಾಗಿ ಸಹಯೋಗಿಗಳಾಗುವವರಿಗೆ ಬಹುಮಾನವನ್ನು ಕಳಿಸುವೆವು.

ಚಿಕ್ಕವರು ತಂದೆಯ ಸಮಾನರಾಗಿರುತ್ತಾರೆ. ಎಲ್ಲರೂ ಒಂದೇ, ಆದರೂ ಪರಿಚಯಕ್ಕಾಗಿ ಗುಜರಾತಿ, ಪಂಜಾಬಿ ಎಂದು ಕರೆಯಲಾಗುತ್ತದೆ. ಗುಜರಾತಿ ನಂಬರವನ್ ಆಗಿ ತೋರಿಸುವಿರಲ್ಲವೇ? ಬಹುಮಾನಕ್ಕೆ ಯೋಗ್ಯರು ಯಾರು ಆಗುತ್ತಾರೆ ಎಂದು ನೋಡುವೆವು, ಒಂದೊಂದು ರತ್ನದ ವಿಶೇಷತೆ ತನ್ನದೇ ಆಗಿದೆ. ಕೆಲವರಲ್ಲಿ ಸ್ನೇಹದ, ಕೆಲವರಲ್ಲಿ ಸಹಯೋಗದ, ಕೆಲವರಲ್ಲಿ ಶಕ್ತಿಯ ಕೆಲವರಲ್ಲಿ ದಿವ್ಯಗುಣಗಳ ಮೂರ್ತಿಯಾಗುವ, ಕೆಲವರಲ್ಲಿ ಜ್ಞಾನದ ವಿಶೇಷತೆಯಿದೆ. ಈಗ ಎಲ್ಲಾ ಶಕ್ತಿಗಳನ್ನು ತಮ್ಮಲ್ಲಿ ತುಂಬಿಕೊಳ್ಳಿ, ಸರ್ವಗುಣ ಸಂಪನ್ನ, 16 ಕಲೆ ಸಂಪೂರ್ಣರಾಗಬೇಕು. ಸರ್ವಗುಣ ಸಂಪನ್ನರಾಗದಿದ್ದರೆ 16 ಕಲೆಯಿಂದ 14 ಕಲೆಯವರಾಗುವಿರಿ. ಚಂದ್ರನಲ್ಲಿ ಸ್ವಲ್ಪ ಕಲೆ ಕಡಿಮೆಯಾದರೂ ಚೆನ್ನಾಗಿರುವುದಿಲ್ಲ. ಸಂಪೂರ್ಣತೆಯಿಂದ ಸುಂದರತೆ ಬರುತ್ತದೆ. ತೀವ್ರ ಪುರುಷಾರ್ಥಿಯ ಬಾಣ ಸದಾ ಗುರಿ ತಲುಪುತ್ತದೆ. ಎಂದಿಗೂ ಮಾಯೆಯಿಂದ ಸೋಲಬಾರದು. ಪ್ರಕಾಶದ ಗೋಳವಾಗಿ ಹೋಗಿ. ಪ್ರಕಾಶ ಎಂದು ಜ್ಞಾನಕ್ಕೂ ಹೇಳಲಾಗುತ್ತದೆ ಮತ್ತು ಶಕ್ತಿಯೂ ಆಗಿದೆ. "ಪ್ರಯತ್ನ" ಎಂಬುದು ದುರ್ಬಲತೆಯ ಶಬ್ದ ಎಲ್ಲಿ ದುರ್ಬಲತೆಯಿದೆಯೋ ಅಲ್ಲಿ ಮೊದಲು ಮಾಯೆ ತಯಾರಾಗುತ್ತದೆ. ಹೇಗೆ ದುರ್ಬಲ ಶರೀರದಲ್ಲಿ ರೋಗ ಬೇಗನೇ ಬರುತ್ತದೆಯೋ, ಹಾಗೆ "ಪ್ರಯತ್ನ" ಎಂಬ ಶಬ್ದವನ್ನು ಹೇಳುವುದು ಆತ್ಮನ ದುರ್ಬಲತೆ. ಇವರು ನಮ್ಮ ಗಿರಾಕಿಯೆಂದು ಮಾಯೆ ಬರುತ್ತದೆ. ನಿಶ್ಚಯದ ವಿಜಯವಿದೆ. ಇಡೀ ದಿನದ ಸ್ಮೃತಿ ಹೇಗಿರುವುದೋ ಹಾಗೆಯೇ ಸ್ವಪ್ನಗಳು ಬರುತ್ತವೆ. ಇಡೀ ದಿನದಲ್ಲಿ ಶಕ್ತಿರೂಪದ ಸ್ಥಿತಿಯಿದ್ದರೆ ದುರ್ಬಲತೆ ಸ್ವಪ್ನದಲ್ಲಿಯೂ ಬರುವುದಿಲ್ಲ. ಒಳ್ಳೆಯದು.

ಅವ್ಯಕ್ತ ಮುರಳಿ 05-03-1971.

*<u>ಭಟ್ಟಿಯ ಅಲೌಕಿಕ ಮುದ್ರೆ</u>*

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನನ್ನ ಮಸ್ತಕದಲ್ಲಿ ಸದಾ ಭಾಗ್ಯ ಮತ್ತು ಸೌಭಾಗ್ಯದ ಎರಡೂ ರೇಖೆಗಳು ಹೊಳೆಯುತ್ತಿವೆ.

2. ನಾನು ತಂದೆಯಿಂದ ಲಭಿಸಿರುವ

•ಸ್ವಯಂ ಅನ್ನು ನೋಡಿಕೊಳ್ಳುವ ದರ್ಪಣ

• ಸ್ಮೃತಿ ಯಾತ್ರೆಯನ್ನು ನಿರಂತರ ಶ್ರೇಷ್ಠವಾಗಿ ತಯಾರಿಸಿಕೊಳ್ಳುವ ಪ್ರಕಾಶದ ಗೋಳ. ಈ ಎರಡನ್ನು ಸದಾ ಜೊತೆಗಿಟ್ಟುಕೊಂಡಿರುವ ತಂದೆಯ ಸಮಾನ ಮಾಸ್ಟರ್ ಸತ್ಯಂ ಶಿವಂ ಸುಂದರಂ ಸ್ವರೂಪ.

3. ನಾನು ಲೌಕಿಕ ಸ್ಥಿತಿಯನ್ನು, ಲೌಕಿಕ ವೃತ್ತಿ, ದೃಷ್ಟಿ, ಸಂಬಂಧದ ಸ್ಮೃತಿ, ಲೌಕಿಕ ಮರ್ಯಾದೆಗಳನ್ನು ಸ್ವಾಹಾ ಮಾಡಿ ಅಲೌಕಿಕ ರೀತಿ ಪದ್ಧತಿಗಳ ಮುದ್ರೆಯನ್ನು ಪಕ್ಕಾ ಮಾಡಿಕೊಂಡಿದ್ದೇನೆ.

4. ನಾನು ವಿಜಯೀ ರತ್ನ, ಸದಾ ವಿಜಯ ನನ್ನ ಜನ್ಮ ಸಿದ್ಧ ಅಧಿಕಾರ.

5. ನಾನು ಆದಿ, ಮದ್ಯ, ಅಂತ್ಯ - ಮೂರೂ ಕಾಲಗಳನ್ನು ತಿಳಿದುಕೊಂಡಿರುವ ಮಾಸ್ಟರ್ ನಾಲೆಜ್ ಫುಲ್ ಸ್ವರೂಪ.

6. ನಾನು ನನ್ನ ಸ್ವ ಪರಿವರ್ತನೆಯಿಂದ ಇತರರನ್ನು ಪರಿವರ್ತನೆ ಮಾಡುತ್ತಿದ್ದೇನೆ.

7. ನಾನು ಪ್ರತಿ ವಿಷಯದಲ್ಲಿ ಸ್ವ ಪರಿವರ್ತನೆಯಾಗುತ್ತಾ...ಲೌಕಿಕವನ್ನು ಅಲೌಕಿಕಕ್ಕೆ ಪರಿವರ್ತಿಸಿ, ಪರಿಪಕ್ವವಾಗಿ, ನಿಶ್ಚಯದಿಂದ ವಿಜಯಿಯಾಗಿದ್ದೇನೆ.

8. ನಾನು ಕರ್ಮ ಬಂಧನಗಳನ್ನು ಕತ್ತರಿಸಿ, ನನ್ನ ಸ್ವಭಾವ ಸಂಸ್ಕಾರಗಳನ್ನು ಪರಿವರ್ತಿಸಿ, ನನ್ನ ಸರ್ವ ಸಂಬಂಧಗಳನ್ನು ತಂದೆಯೊಂದಿಗೆ ಜೋಡಿಸಿ ಸಂಪೂರ್ಣವಾಗಿ ತಯಾರಾಗಿದ್ದೇನೆ.

9. ನಾನು ತಂದೆ ಕೊಟ್ಟಿರುವ ಸ್ಮೃತಿಯ ತಿಲಕವನ್ನು ಸದಾ ಉಳಿಸಿಕೊಳ್ಳುವ ವಿಜಯೀ ಸ್ವರೂಪ.

10. ನಾನು ನಿರ್ಭಯ ಸ್ವರೂಪ.

11. ನಾನು ಸ್ವತಂತ್ರವಾಗಿದ್ದೇನೆ.

12. ನಾನು ಮಾಯಾಜೀತ್ ಸ್ವರೂಪ.

13. ನಾನು ಸರ್ವ ಗುಣ ಸಂಪನ್ನವಾಗಿ 16 ಕಲಾ ಸಂಪೂರ್ಣವಾಗಿ ಇದ್ದೇನೆ.

14. ತೀವ್ರ ಪುರುಷಾರ್ಥಿಯಾದ ನನ್ನ ಬಾಣ ( ಗಮನ) ಸದಾ ಗುರಿಯ ಕಡೆ ಇದೆ.